(SRI C. M. POONACHA) never fail in future also to press the matter of taking up this line as early as possible.

ಶ್ರೀ ಬಿ. ಡಿ. ಜತ್ತಿ.—ರಾಯಭಾಗದಿಂದ ಆಚೆ ಇರುವ ಪ್ರದೇಶಗಳಿಗೂ ಅನುಕೂಲವಾಗಿರುವ ರೀತಿಯಲ್ಲಿ ರೈಲು ಮಾರ್ಗವನ್ನು ಕಟ್ಟಬೇಕೆಂಬ ಸೂಚನೆ ಸರ್ಕಾರದ ಗಮನದಲ್ಲಿಲ್ಲವೇ ?

ಶ್ರೀ ಸಿ. ಎಂ. ಪೂಣಚ್ಚ.—ಹಾಗೆ ಒಂದು ಸೂಚನೆ ಇದೆ. ಈಗ ಸರ್ವೇ ರಾಯಭಾಗದವರೆಗೂ ಮಾಡಿದೆ.

Sri G. DUGGAPPA.—May I know whether any assurance was given by the Railway Minister at the time of the meeting of the Chief Ministers of the different States ?

Sri C. M. POONACHA.—The railway authorities were very sympathetic and particularly the Railway Minister was very sympathetic to the demands and the requests made by the State Governments through the Chief Ministers of their States.

Survey of Somedyapanahalli, Kanakapura Taluk.

Q.—1091. Sri M. LINGE GOWDA (Kanakapura).—

Will the Government be pleased to state :—

(*a*) whether Somedyapanahalli, Kanakapura Taluk, has been surveyed ;

(*b*) whether it has also come to their notice that records of survey conducted in the presence of ryots are quite different from the ones that are forwarded to them ?

A.—Sri M. P. PATIL (Minister for Revenue).—

(*a*) Yes.

(*b*) No.

ಶ್ರೀ ಎಂ. ಲಿಂಗೇಗೌಡ.—ಸೋಮೇದ್ಯಾಪನಹಳ್ಳಿ ಸರ್ವೆ ಆಗಿರುವುದು ಸರ್ಕಾರದವರು ತಿಳಿದುಕೊಂಡಿದ್ದಾರೆಯೇ ?

*ಶ್ರೀ ಎಂ. ಪಿ. ಪಾಟೀಲ್.—ಅದು ನನಗೆ ಗೊತ್ತಿಲ್ಲ. I want notice.

ಶ್ರೀ ಎಂ. ಲಿಂಗೇಗೌಡ.—ಇದು ರೈತರಿಗೆ ತಾತ ಮುತ್ತಾತನ ಕಾಲದಿಂದ ಬಂದಂಥ ಹಕ್ಕು. ಈ ಹಕ್ಕನ್ನು ಸರ್ವೇ ಡಿಪಾರ್ಟುಮೆಂಟಿನ ಮುಖೇನ ಇನಾಂದಾರರ ಹೆಸರಿನಲ್ಲಿ ಸರ್ವೆ ಮಾಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಇಲ್ಲ.

ಶ್ರೀ ಎಂ. ಲಿಂಗೇಗೌಡ.—ಈ ಕಾರ್ಯ ಮಾಡುವಾಗ, ಸರ್ವೇ ಸೂಪರಿಂಟೆಂಡೆಂಟ್, ಡಿಸ್ಟ್ರಿಕ್ಟ್ ಸರ್ವೇ ಆಫೀಸರ್, ಸೂಪರ್‌ವೈಸರ್, ಸರ್ವೇ ಅಮಲ್ದಾರರೂ, ಎಲ್ಲರೂ ಒಂದಾಗಿ ರೈತರಿಗೆ ಮೋಸ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಇಲ್ಲ.

ಶ್ರೀ ಎಂ. ಲಿಂಗೇಗೌಡ.—ತಮಗೆ ಆ ವಿಷಯದಲ್ಲಿ ಸರ್ಕಾರಕ್ಕೆ ರಿಜಿಸ್ಟರ್ ಮುಖೇನ ಪತ್ರಗಳು ಬಂದಿಲ್ಲವೇ ?

ಶ್ರೀ ಎಂ. ಪಿ. ಪಾಟೀಲ್.—ಯಾವುದೇ ಪತ್ರ ಬಂದಿಲ್ಲ.

ಶ್ರೀ ಎಂ. ಲಿಂಗೇಗೌಡ.—ಅಂತಹ ನಿವೇಶಗಳನ್ನು ತಮ್ಮ ಗಮನಕ್ಕೆ ತಂದರೆ ದಯವಿಟ್ಟು ಎನ್‌ಕ್ವೈರಿ ಮಾಡುವುದಕ್ಕೆ ಏರ್ಪಾಡುಮಾಡುತ್ತೀರಾ ?

ಶ್ರೀ ಎಂ. ಪಿ. ಪಾಟೀಲ್.—ಹೌದು.

Preserving of Fuel in the Forest at Chikmagalur.

Q.—1161. Sri A. M. BASAVE GOWDA (Chikmagalur).—

Will the Government be pleased to state :—

whether it has come to their notice that a large part of the jungle is being destroyed for fuel ; if so, what steps are being taken by Government for the afforestation of the same ?

A.—Sri H. S. RUDRAPPA (Minister for Agriculture).—

No.

ಶ್ರೀ ಎ. ಎಂ. ಬಸವೇಗೌಡ.—ನನ್ನ ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದ್ದೀರಿ. ಹಾಗಾದರೆ ಗಿಡಗಳನ್ನು ಬೆಳೆಸುವುದಕ್ಕೆ ಕಾಡಿನಲ್ಲಿ ಅನುಕೂಲವಾಗುತ್ತಾ ಇಲ್ಲ. ಆಲ್ಲಿ ಹೆಚ್ಚು ಭಾಗ ನಾಶವಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಚ್. ಎಸ್. ರುದ್ರಪ್ಪ.—ತಾವು ಹೇಳಿದ ಪ್ರಕಾರ ನಾಶವಾಗುತ್ತಿಲ್ಲ.

ಶ್ರೀ ಎ. ಎಂ. ಬಸವೇಗೌಡ.—ಅರಣ್ಯದಲ್ಲಿ ಹೆಚ್ಚು ಭಾಗ ನಾಶವಾಗುತ್ತಿದೆಯೆಂದು ತಮ್ಮ ಗಮನಕ್ಕೆ ತಂದರೆ, ಆ ಕಾರ್ಯವನ್ನು ಪುನರುಜ್ಜೀವನಗೊಳಿಸಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಎಂ. ಬಸವೇಗೌಡ.—ಅವೇನು ಕಾರ್ಯಕ್ರಮಗಳು ?

Sri H. S. RUDRAPPA.—There are afforestation schemes in all the areas where it is absolutely necessary. In the Second Five-Year Plan we have provided Rs. 77·31 lakhs for afforestation schemes to plant about 1,01,750 acres.